ನಿಗದಿಪಡಿಸಲಾಗಿದೆ. ಸದರಿ 2.50 ಟಿಎಂಸಿ ನೀರಿನ ಹಂಚಿಕೆ ಪ್ರಮುಖವಾಗಿ ಔರಾದ್ ತಾಲ್ಲೂಕಿನ ನಿಗದಿತ ಪ್ರದೇಶಕ್ಕೆ ಅನ್ವಯಿಸುತ್ತದೆ. ಈ ನೀರಿನ ಪ್ರಮಾಣದಲ್ಲಿ ಈಗಾಗಲೇ ಅಸ್ಥಿತ್ವದಲ್ಲಿರುವ ಹದಿನಾರು(16) ಸಣ್ಣ ನೀರಾವರಿ ಯೋಜನೆಗಳಿಗೆ 0.742 ಟಿಎಂಸಿ ನೀರು ಬಳಕೆಯಾಗುತ್ತದೆ. ಉಳಿದ 1.756 ಟಿಎಂಸಿ ಬಳಕೆ ಮಾಡುವ ಉದ್ದೇಶದಿಂದ ಔರಾದ್ ತಾಲೂಕಿನಲ್ಲಿ ಒಟ್ಟು 43 ಸ್ಥಳಗಳಲ್ಲಿ 1.47 ಟಿಎಂಸಿ ನೀರಿನ ಬಳಕೆಗಾಗಿ ಗುರುತಿಸಿ, ಪೂರ್ವಭಾವಿ ಸರ್ವೇಷಣೆ ನಡೆಸಿ ವರದಿಯನ್ನು ಸಣ್ಣ ನೀರಾವರಿ ಇಲಾಖೆಯಿಂದ ಪಡೆಯಲಾಗಿದೆ. ಇನ್ನುಳಿದ 0.268 ಟಿಎಂಸಿ ನೀರಿನ ಪ್ರಮಾಣದಲ್ಲಿ ಔರಾದ್ ತಾಲೂಕಿನ ಮತ್ತು ಬೀದರ್ ಜಿಲ್ಲೆಯಲ್ಲಿ ಬೇರೆ ಸೂಕ್ತ ಸ್ಥಳಗಳಲ್ಲಿ ಇಂಗು ಕೆರೆಗಳು, ಅಣೆಕಟ್ಟುಗಳು, ಚೆಕ್ ಡ್ಯಾಂಗಳು ಸಣ್ಣ ನೀರಾವರಿಯಡಿ ನಿರ್ಮಿಸಬಹುದಾಗಿದೆ. ಈ 43 ಯೋಜನೆಗಳ ಪೈಕಿ 10 ಯೋಜನೆಗಳಿಗೆ ಸಣ್ಣ ನೀರಾವರಿರಡಿ ಮಂಜೂರಾತಿ ನೀಡಿದ್ದು, ವಿವಿಧ ಹಂತದಲ್ಲಿವೆ.

ವಿಷಯ: ಬೀದರ್ ಜಿಲ್ಲೆಯಲ್ಲಿ ಭಾರೀ ಕೈಗಾರಿಕೆಗಳನ್ನು ಸ್ಥಾಪಿಸಲು ಕೈಗೊಂಡಿರುವ ಕ್ರಮ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**:**	**(367)137**
2. ಸದಸ್ಯರ ಹೆಸರು	**:**	**ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)**
3. ಉತ್ತರಿಸುವ ಸಚಿವರು	**:**	**ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು(ಶ್ರೀ ಮುರುಗೇಶ ಆರ್.ನಿರಾಣಿ)**

ಅ. ಬೀದರ್ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸ್ಥಾಪನೆಯನ್ನು ಉತ್ತೇಜಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ನೂತನ ಕೈಗಾರಿಕಾ ನೀತಿ 2006–11ರಂತೆ ಬೀದರ್ ಜಿಲ್ಲೆಯ 4 ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ಹಾಗೂ ಬೀದರ್ ತಾಲ್ಲೂಕನ್ನು ಹಿಂದುಳಿದ ತಾಲ್ಲೂಕು ಎಂದು ಗುರುತಿಸಿದ್ದು, ಈ ತಾಲ್ಲೂಕುಗಳಲ್ಲಿ ಸ್ಥಾಪಿತವಾಗುವ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತಿದೆ.

ಆ. ಈಗ ಜಿಲ್ಲೆಯಲ್ಲಿರುವ ಭಾರೀ ಮತ್ತು ಮಧ್ಯಮ ಕೈಗಾರಿಕೆಗಳ ಸಂಖ್ಯೆ ಎಷ್ಟು; ಆ ಪೈಕಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವವುಗಳೆಷ್ಟು ಹಾಗೂ ರೋಗಗ್ರಸ್ತವಾಗಿರುವವುಗಳೆಷ್ಟು (ಇವುಗಳ ಹೆಸರು ವಿವರಗಳನ್ನು ಒದಗಿಸುವುದು)

ಬೀದರ್ ಜಿಲ್ಲೆಯಲ್ಲಿ 7 ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಇರುತ್ತವೆ. ಇವುಗಳಲ್ಲಿ 5 ಕೈಗಾರಿಕೆಗಳು ಕಾರ್ಯ ನಿರ್ವಹಿಸುತ್ತಿದ್ದು, ಉಳಿದ 2 ಘಟಕಗಳು ರೋಗಗ್ರಸ್ಥವಾಗಿ ಮುಚ್ಚಲ್ಪಟ್ಟಿರುತ್ತವೆ.

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ. ಜಿಲ್ಲೆಯಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಮುಂದೆ ಬರುವ ಉದ್ಯಮಿಗಳಿಗೆ ಸರ್ಕಾರ ರೂಪಕವಾಗಿ ಯಾವ ರಿಯಾಯಿತಿ ಮತ್ತು ವಿನಾಯಿತಿಗಳನ್ನು ನೀಡುತ್ತದೆ.

ನೂತನ ಕೈಗಾರಿಕಾ ನೀತಿ 2006–11ರ ಪ್ರಕಾರ ಹೊಸದಾಗಿ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರುವ ಉದ್ಯಮಿಗಳಿಗೆ ಕೆಳಕಂಡ ರಿಯಾಯಿತಿ ಮತ್ತು ಸೌಲಭ್ಯಗಳನ್ನು ನೀಡಲಾಗುವುದು.

1. ಸ್ಟಾಂಪ್ ಡ್ಯೂಟಿಯಲ್ಲಿ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ಕಡಿತ
2. ಪರಿವರ್ತನಾ ಶುಲ್ಕದ ಮನ್ನಾ (ಕೈಗಾರಿಕಾ ಬಳಕೆಗಾಗಿ ಪರಿವರ್ತನೆಯಾಗುವ ಭೂಮಿ ಮೇಲೆ)
3. ತ್ಯಾಜ್ಯ ವಸ್ತುಗಳ ಸಂಸ್ಕರಣಾ ಸ್ಥಾವರಗಳ (ಇಟಿಪಿ) ಸ್ಥಾಪನೆಗೆ ಸಹಾಯಧನ
4. ಪ್ರವೇಶ ತೆರಿಗೆ ಮತ್ತು ವಿಶೇಷ ಪ್ರವೇಶ ತೆರಿಗೆಯಲ್ಲಿ ವಿನಾಯಿತಿ
5. ಕೃಷಿ ಉತ್ಪನ್ನಗಳನ್ನು ಸಂಸ್ಕರಿಸುವ ಕೈಗಾರಿಕೆಗಳಿಗೆ ಎ.ಪಿ.ಎಂ.ಸಿ. ಸೆಸ್ ನಿಂದ ವಿನಾಯಿತಿ.

ಈ ಸದರಿ ಜಿಲ್ಲೆಯಲ್ಲಿ ಕಳೆದ 3 ವರ್ಷಗಳ ಅವಧಿಯಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಎಷ್ಟು ಅರ್ಜಿಗಳು ಬಂದಿವೆ;

ಕಳೆದ 3 ವರ್ಷಗಳಲ್ಲಿ (2005–06 ರಿಂದ 2007–08ನೇ ಸಾಲಿನವರೆಗೆ) ರೂ.3.00 ರಿಂದ 50.00 ಕೋಟಿ ಒಳಗಿನ ಬಂಡವಾಳ ಹೂಡಿಕೆಯ 8 ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಈ ಎಲ್ಲಾ ಪ್ರಸ್ತಾವನೆಗಳನ್ನು ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಅನುಮೋದಿಸಲಾಗಿದೆ. ಈ ಯೋಜನೆಗಳಿಂದ ರೂ.91.67 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು 1400 ಜನರಿಗೆ ಉದ್ಯೋಗಾವಕಾಶ ಲಭ್ಯವಾಗಲಿದೆ.

ಇದೇ ಅವಧಿಯಲ್ಲಿ ರೂ.50.00 ಕೋಟಿಗಳಿಗಿಂತ ಹೆಚ್ಚಿನ ಬಂಡವಾಳ ಹೂಡಿಕೆಯ 3 ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಈ ಎಲ್ಲಾ ಪ್ರಸ್ತಾವನೆಗಳನ್ನು ರಾಜ್ಯ

ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆಯಲ್ಲಿ ಅನುಮೋದಿಸಲಾಗಿದೆ. ಈ ಯೋಜನೆಗಳಿಂದ ರೂ.2529.40 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು 18501 ಜನರಿಗೆ ಉದ್ಯೋಗಾವಕಾಶ ಲಭ್ಯವಾಗಲಿದೆ.

ಉ. ಭಾರೀ ಕೈಗಾರಿಕೋದ್ಯಮಿಗಳನ್ನು ಜಿಲ್ಲೆಗೆ ಆಕರ್ಷಿಸಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ರಾಜ್ಯದಲ್ಲಿ ಬಂಡವಾಳ ಆಕರ್ಷಣೆಗೆ ಬಂಡವಾಳ ಹೂಡಿಕೆದಾರರ ಸಮಾವೇಶಗಳನ್ನು ನಡೆಸಲಾಗುತ್ತಿದೆ. ಅಲ್ಲದೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ವ್ಯಾಪಾರ ಉತ್ತೇಜನ ಕಾರ್ಯಕ್ರಮಗಳಲ್ಲಿ ಭಾಗವಹಿಸಲಾಗುತ್ತಿದೆ.

ಬೀದರ್ ಹೈದರಾಬಾದಿಗೆ ಹತ್ತಿರವಿರುವುದರಿಂದ ಹೈದರಾಬಾದಿನ ಬಂಡವಾಳ ಹೂಡಿಕೆದಾರರು ಹೆಚ್ಚಿನ ಆಸಕ್ತಿ ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಬಂಡವಾಳ ಆಕರ್ಷಣೆಗೆ ಡಿಸೆಂಬರ್ 2006 ರಂದು ಹೈದರಾಬಾದಿನಲ್ಲಿ ರೋಡ್ ಶೋ ನಡೆಸಲಾಗಿದೆ.

ಬೀದರ್ – ಚಿತ್ರದುರ್ಗ – ಬೆಂಗಳೂರು ಉದ್ದಗಲಕ್ಕೂ ಕೈಗಾರಿಕಾಬಿವೃದ್ಧಿಗೆ ಸುವರ್ಣ ಕರ್ನಾಟಕ ಅಭಿವೃದ್ಧಿ ಕಾರಿಡಾರ್ ಯೋಜನೆಯನ್ನು ಜಾರಿಗೊಳಿಸಲಾಗುವುದು.

ರಾಜ್ಯದಲ್ಲಿ ಅಧಿಕ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು 2009ರಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಆಯೋಜಿಸಲು ನಿರ್ಧರಿಸಲಾಗಿದೆ. ಇವುಗಳಿಂದ ಬೀದರ್ ಜಿಲ್ಲೆಯಲ್ಲೂ ಸಹ ಬಂಡವಾಳ ಹೂಡಿಕೆಗೆ ಅನುಕೂಲವಾಗುತ್ತದೆ.

ಅನುಬಂಧ

ವಿಧಾನಸಭೆ ಸದಸ್ಯರಾದ ಶ್ರೀ.ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)ರವರ ಪ್ರಶ್ನೆ ಸಂಖ್ಯೆ. 367

ಬೀದರ್ ಜಿಲ್ಲೆಯ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಮುಚ್ಚಿರುವ/ರೋಗಗ್ರಸ್ಥ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಪಟ್ಟಿ

ಕ್ರ.ಸಂ.	ಘಟಕಗಳ ಹೆಸರು ಮತ್ತು ವಿಳಾಸ	ಬಂಡವಾಳ ಹೂಡಿಕೆ (ರೂ.ಕೋಟಿಗಳಲ್ಲಿ)	ಉದ್ಯೋಗಾವಕಾಶ ಸಂಖ್ಯೆ
1.	ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಲಿ., ಹಳ್ಳಿ ಸೇಡಂ (ಬಿ) ಹುಮನಾಬಾದ್ ತಾಲ್ಲೂಕು	82.90	1150
2.	ಇಂಡಿಯನ್ ಬ್ರಿವರಿ ಅಂಡ್ ಡಿಸ್ಟಿಲರಿ	5.32	245

	ಲಿ., ಹಳ್ಳಿ ಖೇಡ (ಬಿ) ತಾ.ಹುಮನಾಬಾದ್		
3.	ಮಾರುತಿ ಆರ್ಗಾನಿಕ್ಸ್ ಲಿ., ಸಿರಕಟವಳ್ಳಿ, ತಾ:ಹುಮನಾಬಾದ್	9.50	50'
4.	ಮೆ:ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ಲಿ., ಇಮಾಮಪೂರ ಗ್ರಾಮ ಜನವಾಡಾ, ಬೀದರ್ ತಾಲ್ಲೂಕು	56.07	500
5.	ದಿ ಮಹಾತ್ಮಾ ಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ಲಿ., ಭಾಲ್ಕಿ ತಾಲ್ಲೂಕು	57.00	520
	ಮುಚ್ಚಿರುವ ರೋಗಗ್ರಸ್ಥ ಘಟಕಗಳು		
1.	ಸೋಲ್ ಫಾರ್ಮಾಸ್ಯುಟಿಕಲ್ಸ್ ಲಿ., ಕೈಗಾರಿಕಾ ಪ್ರದೇಶ, ಕೋಳಾರ, ಬೀದರ್	10.00	258
2.	ಬಿ.ಎಲ್.ಇಂಡಸ್ಟ್ರೀಸ್ (ಇಂಡಿಯಾ ಪ್ರೈ.ಲಿ.,) ಕೈಗಾರಿಕಾ ಪ್ರದೇಶ, ಹುಮನಾಬಾದ್, ಬೀದರ್	10.30	50

1. **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :** **(368)138**
2. **ಸದಸ್ಯರ ಹೆಸರು :** **ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)**
3. **ಉತ್ತರಿಸುವ ಸಚಿವರು :** **ಸಣ್ಣ ಕೈಗಾರಿಕಾ ಮತ್ತು ರೇಷ್ಮೆ ಸಚಿವರು (ಶ್ರೀ ವೆಂಕಟರಮಣಪ್ಪ)**

ವಿಷಯ: ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಶೀಘ್ರವಾಗಿ ಸಬ್ಸಿಡಿಯನ್ನು ಬಿಡುಗಡೆ ಮಾಡುವುದು.

ಅ. ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಸಣ್ಣ ಕೈಗಾರಿಕೆಗಳಿಗೆ ನೀಡಲಾಗಿರುವ ಸಬ್ಸಿಡಿ ಎಷ್ಟು ಹಾಗೂ ಇನ್ನೂ ಎಷ್ಟು ಸಬ್ಸಿಡಿ ಬಾಕಿ ಉಳಿದಿವೆ (ಜಿಲ್ಲಾವಾರು ವಿವರ ನೀಡುವುದು)

ಸಹಾಯಧನ ಬಿಡುಗಡೆ ವಿವರಗಳು:

ಕ್ರ. ಸಂ.	ವರ್ಷ	ಮೊತ್ತ (ರೂ.ಕೋಟಿಗಳಲ್ಲಿ)
1.	2005–06	84.10